ಹೊಲದ ಸುತ್ತ ತರಾದ ಮುಳ್ಳಿನ ಬೇಲಿ ಹಾಕಿಸಿ, ಅದರ ನಡುವೆ ಚಿಗುರು ಕಡ್ಡಿಗಳನ್ನು ನೆಡಿಸಿದ್ದರು. ಒಂದೆರಡು ಮಳೆ ಬೀಳುತ್ತಲೇ ಆ ಕಡ್ಡಿಗಳೆಲ್ಲಾ ಚಿಗಿತು, ದನಕರುಗಳಿರಲಿ ಕುರಿಮೇಕೆಗಳೂ ನುಸಿಯಲಾಗದಂತೆ ದಟ್ಟವಾಗಿಬಿಟ್ಟಿತ್ತು. ಅದಾದ ಮೇಲೆ ಅದರೊಳಗಿದ್ದ ಒಂದೇ ಒಂದು ಕಾಡು ಗಿಡ, ಮರಕ್ಕೂ ಐಬಾಗದಂತೆ ಹೊಲವನ್ನು ಹಸನು ಮಾಡಿಸಿ, ಅಲ್ಲೊಂದು ಪುಟ್ಟ ಗುಡಿಸಲನ್ನು ಹಾಕಿಸಿದ್ದರು. ಮಳೆಗಾಲದಲ್ಲಿ ರಾಗಿ, ಜೋಳ, ಅವರೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ನೀರು ತುಂಬಾ ಮೇಲೇ ಸಿಕ್ಕುತ್ತಿದ್ದರಿಂದ ಸಣ್ಣದೊಂದು ಕೈಬಾವಿಯನ್ನು ತೋಡಿಸಿ, ಕೆಲವು ಹಣ್ಣಿನ ಗಿಡಗಳನ್ನೂ ನೆಡಿಸಿದ್ದರು. ಸಾಲದ್ದಕ್ಕೆ ಪೂಂಗೊಡಿ ಅವುಗಳ ಜೊತೆಗೆ ಥರಾವರಿ ಹೂವಿನ ಗಿಡಗಳನ್ನೂ ಜೊತೆಮಾಡಿದ್ದಳು. ಅವು ಹೂಬಿಡುವ ಕಾಲದಲ್ಲಿ ಹೊಲದ ತುಂಬಾ ಅಡರಿಕೊಳ್ಳುತ್ತಿದ್ದ ಹೂವಿನ ಘಮಲು ದಾರಿಹೋಕರನ್ನು ಅತ್ತ ನೋಡುವಂತೆ ಮಾಡುತ್ತಿತ್ತು. ಅವರ ತಾರೀಫಿನ ಮಾತುಗಳು ಹೊಲದ ಬಗೆಗಿನ ದಂಪತಿಯ ಪ್ರೀತಿಯನ್ನು ದುಪ್ಪಟ್ಟು ಮಾಡುತ್ತಿತ್ತು. ಹೀಗೆ ಎಲ್ಲದೂ ಒಂದು ಹಂತಕ್ಕೆ ಬಂತು ಅಂದುಕೊಳ್ಳುವಷ್ಟರಲ್ಲಿ ಮನವಾಳನ್‌ನ ಬದುಕು ದಿಢೀರನೆ ಅನಿರೀಕ್ಷಿತ ತಿರುವಿನ ತಟಕ್ಕೆ ಬಂದು ನಿಂತುಬಿಟ್ಟಿತ್ತು.

ಅದೊಂದು ಒಂದು ದಿನ ಅವನೊಂದಿಗೆ ಹೊಲಕ್ಕೆ ಹೋಗಿದ್ದ ಪೂಂಗೊಡಿ ಇದ್ದಕ್ಕಿದ್ದಂತೆ ತಲೆಸುತ್ತಿ ಬಿದ್ದುಬಿಟ್ಟಿದ್ದಳು. ಅದೇ ನೆಪವಾಗಿ ಹಾಸಿಗೆ ಹಿಡಿದಿದ್ದಳು. ನಂತರ ಕಡೆಯ ಹಂತದ ಕ್ಯಾನ್ಸರ್ ಇರುವುದು ಪತ್ತೆಯಾದಾಗ ಮನವಾಳನ್ ಭೂಮಿಗಿಳಿದುಹೋಗಿದ್ದ. ಒಂದಷ್ಟು ದಿನ ಆಸ್ಪತ್ರೆಯಲಿದ್ದ ಪೂಂಗೊಡಿ ಮನೆಗೆ ಬಂದ ಕೆಲ ದಿನಗಳಲ್ಲೇ ಬದುಕಿಗೆ ಶರಣು ಹೇಳಿದ್ದಳು. ಆಗ ಅವಳನ್ನು ಹೊಲದಲ್ಲಿಯೇ ಮಣ್ಣು ಮಾಡಿ, ಅದರ ಮೇಲೆ ಗ್ರಾನೈಟ್ ಕಲ್ಲುಗಳಿಂದ ಸಮಾಧಿಯನ್ನು ಕಟ್ಟಿಸಿದ್ದ. ಗುಡಿಸಲಿದ್ದ ಜಾಗದಲ್ಲಿ ಪುಟ್ಟದೊಂದು ಮನೆ ಕಟ್ಟಿಸಿಕೊಂಡು ಪೂಂಗೊಡಿಯೊಂದಿಗೆ ಕಡೆಗಾಲವನ್ನು ಅಲ್ಲೇ ಕಳೆಯಬೇಕು, ಅಂದುಕೊಂಡಿದ್ದ ಮನವಾಳನ್‌ಗೆ ಮುಂದಿನ ಬದುಕು ಮಬ್ಬಾಗಿಹೋಗಿತ್ತು. ಆಗ ಅವನು ನಿವೃತ್ತಿಯಾಗಲು ಇನ್ನೂ ಹತ್ತು ವರ್ಷಗಳಿದ್ದವು.

## 4

ಈ ಹತ್ತು ವರ್ಷಗಳನ್ನು ಕಳೆಯುವ ಹೊತ್ತಿಗೆ ಮನವಾಳನ್‌ನ ಮಕ್ಕಳಿಬ್ಬರೂ ಬೆಂಗಳೂರನ್ನೂ ಬಿಟ್ಟು ಕಾಯಮ್ಮಾಗಿ ವಿದೇಶಕ್ಕೆ ಹಾರಿದ್ದರು. ಆಗ ಮಕ್ಕಳ ಒತ್ತಾಯಕ್ಕೆ ಗಂಟುಬಿದ್ದು ಮನವಾಳನ್ ಮಕ್ಕಳನ್ನು ಕೂಡಿಕೊಂಡಿದ್ದನು. ಆ ಹೊತ್ತಲ್ಲಿ ಮಕ್ಕಳು ಎಷ್ಟೇ ಮನ ಒಲಿಸಿದರೂ, ಗುರುಗುಟ್ಟಿದರೂ ಹೊಲವನ್ನು ಮಾರಲು ಮನವಾಳನ್ ಬಿಲ್ಕುಲ್ ಒಪ್ಪಿರಲಿಲ್ಲ. ‘ಅಷ್ಟಕ್ಕೂ ಅದು ನಿಮಗೇನಾದ್ರೂ ಒತ್ತುತಾ ಐತಾ, ಇಲ್ಲಾ ಅದನ್ನ ಮಾರಿಯೇ ಯಾಚ್ಚ ಹಾಕ್ಬೇಕಾಗೈತಾ’ ಅಂತ ಮಕ್ಕಳ ಬಾಯಿ ಮುಚ್ಚಿಸಿದ್ದ. ಯಾವಾಗಾದರೊಮ್ಮೆ ಅಕಸ್ಮಾತ್ತಾಗಿ ಅದನ್ನು ಮಾರುವ ಆಲೋಚನೆ ಅವನೊಳಗೆ ಸುಳಿದಾಡಿದರೂ ಸಾಕು, ಎದೆ ಧಸಕ್ ಅಂದುಬಿಡುತ್ತಿತ್ತು. ಹಾಗಾಗಿ ಅದನ್ನು ಜೋಪಾನಮಾಡಿಕೊಂಡು, ಒಪ್ಪಮಾಡಿಕೊಂಡು ಹೋಗುವವನಿಗಾಗಿ ತಲಾಶ್ ಮಾಡಿದ್ದ. ಎಷ್ಟು ಸಾರ್ತಿ ಅಳೆದೂ ಸುರಿದೂ ನೋಡಿದರೂ ಗುರ್ಸಿದ್ಧ ಅದಕ್ಕೆ ತಕ್ಕವನಂತೆ ಕಂಡಿದ್ದ.

ಹೊಲವನ್ನೂ, ಹೆಂಡತಿಯ ಸಮಾಧಿಯನ್ನೂ ನೋಡಬೇಕು ಅಂತ ಭಾರತಕ್ಕೆ ಹೊರಟಾಗಲೆಲ್ಲಾ ಮಕ್ಕಳು ತೆಗೆಯುತ್ತಿದ್ದ ವಾರ್ತೆಗೆ ಮನವಾಳನ್ ಒಗ್ಗಿಕೊಂಡಿದ್ದ. ಅವರ ಯಾವ ಮಾತುಗಳಿಗೂ ಸೊಪ್ಪು ಹಾಕದೇ ಬಂದುಬಿಡುತ್ತಿದ್ದ. ಆಗ ಗುರ್ಸಿದ್ಧನೊಂದಿಗೆ ಆ ಗುಡಿಸಿಲಿನಲ್ಲೇ ಉಳಿಯುತ್ತಿದ್ದ. ಇರುವಷ್ಟೂ ದಿನ ಹೆಂಡತಿಯ ಸಮಾಧಿಯನ್ನು ಗುಡಿಸಿ ಸಾರಿಸುತ್ತಿದ್ದ. ಅವಳೇ ಬೆಳಸಿದ್ದ ಹೂಗಿಡಗಳಲ್ಲಿ ಇನ್ನೂ ಉಸಿರಿಡಿದುಕೊಂಡಿದ್ದ ಗಿಡಗಳಿಂದ ಹೂಗಳನ್ನೆತ್ತಿ ಸಮಾಧಿಯ ಮೇಲಿಟ್ಟು